
# ಮಾತೇ ಈಗ ಚಿಂತೆ! ಚಿತೆ...



ಜಾವೇದ್ ಅಖ್ತರ್ ಅವರು ಹೇಳಿದ ಮಾತೊಂದು ಪುಟ್ಟ ಕಥೆಯಂತೆಯೂ ಕೇಳುತ್ತದೆ. ಅದು ಹೀಗಿದೆ: 'ಒಡಿಶಾ, ಬಿಹಾರದಂತಹ ಊರುಗಳಲ್ಲಿ, ಮೆಕ್ಸಿಕೊ ತರಹದ ದೇಶದಲ್ಲಿ ಕಿತ್ತು ತಿನ್ನುವ ಬಡತನ ಇದೆ. ಅಲ್ಲಿ ಹೊಟ್ಟೆ ತುಂಬಾ ಉಣ್ಣದವರ ಸಂಖ್ಯೆ ಅಧಿಕ. ಅವರೆಲ್ಲ ಹಸಿಮೆಣಸಿನಕಾಯಿ ತಿನ್ನುವ ಅಭ್ಯಾಸ ಇಟ್ಟುಕೊಂಡಿರುತ್ತಾರೆ. ಅದನ್ನು ತಿನ್ನುವುದು ಒಂದು ಬಗೆಯಲ್ಲಿ ಹಸಿವಿನ ಅರಿವಿನ ಮೇಲೆ ಪರದೆ ಸರಿಸುವ ಅಭ್ಯಾಸದ ಹಾಗೆ. ನಮ್ಮಲ್ಲಿ ಸೊಂಟದ ಕೆಳಗಿನ ಜೋಕ್ ಮಾಡುವವರು ಅಂತಹವೇ ಹಸಿಮೆಣಸಿನಕಾಯಿಯನ್ನು ನೋಡುಗರ, ಕೇಳುಗರ ಕೈಗೆ ಇಡುತ್ತಿದ್ದಾರೆ. ಮೆಣಸಿನಕಾಯಿ ಪಕ್ಕಕ್ಕೆ ಇಟ್ಟು ನೋಡಿದರೆ ನಿಜದ ಹಸಿವಿನ ಅರಿವಾಗುತ್ತದೆ. ಮೈಮರೆಸುವ ಮೆಣಸಿನಕಾಯಿ ನಮಗೆ ಎಷ್ಟು ಬೇಕು ಎನ್ನುವುದು ಜಿಜ್ಞಾಸೆ. 'ಅವರು ಈ ಪುಟ್ಟ ಕಥೆ ಹೇಳಿದ ಹಳೆಯ ವಿಡಿಯೊ ಈಗ ಮತ್ತೆ ಮುನ್ನೆಲೆಗೆ ಬಂದು, ಮೊಬೈಲ್‌ಗಳಲ್ಲಿ ಹರಿದಾಡುತ್ತಿದೆ. ಇದಕ್ಕೆ ಕಾರಣ – ರಣವೀರ್ ಇಲಾಹಾಬಾದಿ ಎಂಬ ಪಾಡ್ಕಾಸ್ಟರ್ ಪೋಷಕರ ಲೈಂಗಿಕತೆ ವಿಷಯವನ್ನು ವಿಲಕ್ಷಣವಾಗಿ ಹೇಳಿದ ವಿವಾದ. ರಣವೀರ್ ಮೇಲೆ ಹಲವು ದೂರುಗಳು ದಾಖಲಾದವು. ಸಂಸತ್ ಕಲಾಪದಲ್ಲಿ ಕೂಡ ವಿಷಯದ ಪ್ರಸ್ತಾಪವಾಯಿತು.

ಬಾಲಿವುಡ್ ನಟ–ನಟಿಯರಷ್ಟೇ ಅಲ್ಲದೆ ವಿವಿಧ ಕ್ಷೇತ್ರಗಳ ಜನಪ್ರಿಯ ವ್ಯಕ್ತಿಗಳ ಸಂದರ್ಶನ ಮಾಡಿಯೇ ರಾಹುಲ್ ಕೂಡ ದೊಡ್ಡ ವೀಕ್ಷಕ ವೃಂದವನ್ನು ಗಳಿಸಿಕೊಂಡಿದ್ದಾರೆ. ಈಗ ಸಾಮಾಜಿಕ ಮಾಧ್ಯಮದ ಇನ್‌ಫ್ಲುಯೆನ್ಸರ್‌ಗಳು ತಕ್ಷಣಕ್ಕೆ ಹೊಳೆಯುವ ತಾರೆಗಳಂತೆ ಕಾಣುತ್ತಿದ್ದಾರೆ. ಈ ಪ್ರಕ್ರಿಯೆ ಕುರಿತು ನಟ ಮನೋಜ್ ವಾಜಪೇಯಿ ಹಾಗೂ ನಿರ್ದೇಶಕ ಇಮ್ತಿಯಾಜ್ ಅಲಿ ಕೂಡ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಜನರಿಗೆ ಏನು ಇಷ್ಟವೋ ಅದನ್ನು ಮಾಡಬೇಕು ಎನ್ನುವುದು ನಿಜ. ಆದರೆ ಅಶ್ಲೀಲವಾಗಿ ಮುಕ್ತ ಮಾತನ್ನು ಯಾರೇ ಆಡಿದರೂ ಅದನ್ನು ಒಪ್ಪಲಾಗದು. ಈಗೀಗ ಅಡ್ಡದಾರಿಯಲ್ಲಿ ಜನಪ್ರಿಯರಾಗಿರುವ ಯುವಕ–ಯುವತಿಯರ ಸಂಖ್ಯೆ ಹೆಚ್ಚಾಗಿದೆ. ಇಂತಹ ಯಶಸ್ಸಿನ ಗ್ರಾಫ್ ಶಾಶ್ವತ ಅಲ್ಲ. ಏರಿದ ವೇಗದಲ್ಲೇ ಇಳಿಕೆಯನ್ನೂ ಕಾಣಬೇಕು. ಸೆಕ್ಸಿಸ್ಟ್ ಜೋಕ್ ಮಾಡುವವರನ್ನು ನೋಡಿ, ಪ್ರಬುದ್ಧರು ಎಂದುಕೊಂಡು ಮುಂದೆ ನಡೆಯುವುದೇ ಸೂಕ್ತ ಎನ್ನುವುದು ಇಮ್ತಿಯಾಜ್ ಅಲಿ ವಿಶ್ಲೇಷಣೆ.

ನಟ ಮನೋಜ್ ವಾಜಪೇಯಿ ಅವರೂ ಇದೇ ಅಭಿಪ್ರಾಯವನ್ನು ಸಮರ್ಥಿಸುತ್ತಾರೆ. ಇರುವ ವಾತಾವರಣ, ಪ್ರೇಕ್ಷಕರ ಮನಸ್ಸು ಎಲ್ಲವನ್ನೂ ಸಾವಧಾನದಿಂದ ಅರ್ಥೈಸಿಕೊಂಡು ಅಭಿವ್ಯಕ್ತಿಸಬೇಕು ಎನ್ನುವುದು ವಿವೇಕ. ಅದು ಇಲ್ಲವಾದರೆ ಕಷ್ಟ ಎಂದು ಮಾತು ಸೇರಿಸಿದರು.

'ಇಂಡಿಯಾಸ್ ಗಾಟ್ ಲ್ಯಾಟೆಂಟ್' ಎಂಬ ಯೂಟ್ಯೂಬ್ ಶೋನಲ್ಲಿ ರಣವೀರ್ ತೀರ್ಪುಗಾರರ ಕುರ್ಚಿಯಲ್ಲಿ ಕುಳಿತು ಮಾಡಿದ್ದ ಕಾಮೆಂಟ್ ಈಗ ಅವರನ್ನು ಸಂಕಷ್ಟಕ್ಕೆ ಒಡ್ಡಿದೆ. ಅವರು ಕ್ಷಮಾಪಣೆ ಕೇಳಿದರಾದರೂ, ಯೂಟ್ಯೂಬ್ ಕಂಟೆಂಟ್ ಮೇಲೆ ಕಡಿವಾಣ ಹಾಕಬೇಕೆಂಬ ಅಭಿಪ್ರಾಯ ವ್ಯಾಪಕವಾಗುತ್ತಿದೆ. ■



## ಧನುಷ್ ನಿರ್ದೇಶನದ ಹೊಸ ಚಿತ್ರ

ಎಂಟು ವರ್ಷಗಳ ಹಿಂದೆ ನಟ ಧನುಷ್ ಪತ್ನಿ ಸೌಂದರ್ಯ ರಜನೀಕಾಂತ್ ಒಂದು ಸಿನಿಮಾ ನಿರ್ದೇಶಿಸುವುದಾಗಿ ಪ್ರಕಟಿಸಿದ್ದರು. ಅದರಲ್ಲಿ ಖುದ್ದು ಧನುಷ್ ನಟಿಸಬೇಕಿತ್ತು. ಕಾರಣಾಂತರಗಳಿಂದ ಅದು ಸಾಕಾರವಾಗಲಿಲ್ಲ. ಧನುಷ್ ಬಳಿ ಆ ಸ್ಕ್ರಿಪ್ಟ್ ಹಾಗೆಯೇ ಇತ್ತು. 2023ರ ಕೊನೆಯ ಘಟ್ಟದಲ್ಲಿ ಅವರು ಅದನ್ನು ಕೈಗೆತ್ತಿಕೊಂಡರು. ತಾವೇ ನಿರ್ದೇಶಿಸುವುದಾಗಿ ನಿರ್ಧರಿಸಿದರು. ನಿರ್ಮಾಣ ಕೂಡ ಅವರದ್ದೇ. ಆದರೆ, ಅಭಿನಯಕ್ಕೆ ಅವರು ಯುವಕ ಯುವತಿಯರ ತಂಡವನ್ನು ಆರಿಸಿಕೊಂಡರು. ಆ ಚಿತ್ರ ಫೆಬ್ರುವರಿ 21ರಂದು ತೆರೆಕಾಣಲಿದೆ.

'ನಿಲವುಕು ಎನ್ ಮೇಲ್ ಎನ್ನಡಿ ಕೋಪಂ' (ಚಂದ್ರನಿಗೆ ನನ್ನ ಮೇಲೆ ಮುನಿಸೇಕೆ) ಎಂಬ ಹೆಸರಿನ ತಮಿಳು ಚಿತ್ರದಲ್ಲಿ ಹೊಸಬರ ದಂಡೇ ಇದೆ. ಪವೀಶ್, ಅನಿಖಾ ಸುರೇಂದ್ರನ್, ಪ್ರಿಯಾ ಪ್ರಕಾಶ್ ವಾರಿಯರ್ ಪ್ರಮುಖ ಪಾತ್ರಧಾರಿಗಳು.

ಯುವಜನತೆಯನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಈ ಕಥಾವಸ್ತುವನ್ನು ಸಿದ್ಧಪಡಿಸಲಾಗಿದೆ ಎನ್ನುವ ಧನುಷ್ ಅವರಿಗೆ ನಿರ್ದೇಶಕರಾಗಿ ಇದು ಮೂರನೇ ಚಿತ್ರ. ಎ.ಆರ್. ರೆಹಮಾನ್ ಅವರ ಸೋದರಳಿಯ ಜಿ.ವಿ. ಪ್ರಕಾಶ್ ಕುಮಾರ್ ಸಂಗೀತದ ಒಂದು ಹಾಡು ಅದಾಗಲೇ ವೀಕ್ಷಕರ ಗಮನಸೆಳೆದಿದೆ.

ನಟರಾಗಿ ಸಾಕಷ್ಟು ಪ್ರಯೋಗಗಳಿಗೆ ಒಡ್ಡಿಕೊಂಡಿರುವ ಧನುಷ್ ಅವರಿಗೆ ನಿರ್ದೇಶನದಲ್ಲೂ ಕೈ ಪಳಗಿಸಿಕೊಳ್ಳಬೇಕೆಂಬ ಬಯಕೆ ಮೊದಲಿನಿಂದಲೂ ಇದೆ. ಆ ನಿಟ್ಟಿನಲ್ಲಿ ಇನ್ನೊಂದು ಹೆಜ್ಜೆ ಈ ಚಿತ್ರ. ■